ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಡಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಿರುವ ಕೆರೆ ತುಂಬಿಸುವ ಯೋಜನೆಗಳನ್ನು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ.

*****

ಓದಲಾಗಿದೆ: (1) ಸರ್ಕಾರ ಆದೇಶ ಸಂಖ್ಯೆ:ಸನೀಇ 87 ಕೆಜಿದು 2004 ದಿನಾಂಕ:05/01/2007.
(2) ಸರ್ಕಾರದ ಆದೇಶ ಸಂಖ್ಯೆ:ಜಸಂಇ 19 ಕೆಬಿಎನ್ 2014 ದಿನಾಂಕ:03/05/2014.
(3) ಸರ್ಕಾರದ ಆದೇಶ ಸಂಖ್ಯೆ:ಜಸಂಇ 13 ಕೆಬಿಎನ್ 2014 ದಿನಾಂಕ:28/02/2014.
(4) ಸರ್ಕಾರದ ಆದೇಶ ಸಂಖ್ಯೆ:ಜಸಂಇ 239 ಸಿಎಎಂ 2015 ದಿನಾಂಕ:05/01/2016.
(5) ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ಇವರ ಪತ್ರ ಸಂಖ್ಯೆ:ವ್ಯನಿ/227/ಕೆರೆ ತುಂಬುವ ಯೋಜನೆ/ತಾಂತ್ರಿಕ/209-20/3534 ದಿನಾಂಕ:03/01/2020

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸಣ್ಣ ನೀರಾವರಿ ಇಲಾಖೆಯ ಆದೇಶದಲ್ಲಿ ಬಿಜಾಪುರ ಜಿಲ್ಲೆಯ 16 ಕೆರೆಗಳು ಮತ್ತು 5 ಬಾಂದಾರಗಳು ಮತ್ತು ಬಾಗಲಕೋಟೆ ಜಿಲ್ಲೆಯ 8 ಕೆರೆಗಳಿಗೆ ಏತ ನೀರಾವರಿ ಯೋಜನೆಯನ್ನು ಕೈಗೊಳ್ಳುವ ಮೂಲಕ ನೀರು ತುಂಬಿಸಲು ಸುಮಾರು ರೂ.86.10 ಕೋಟಿ ಅಂದಾಜು ಮೊತ್ತದ ಯೋಜನೆಯನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

(1) ಈ ಯೋಜನೆಯ ಅನುಷ್ಠಾನವನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ವಹಿಸುವುದು.
(2) ಈ ಯೋಜನೆಗೆ ಅಗತ್ಯವಿರುವ ಅನುದಾನವನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಆಯವ್ಯಯ ಅನುದಾನದ ಮೂಲಕ ಅಥವಾ ಹೆಚ್ಚುವರಿಯಾಗಿ IEBR ಹಂಚಿಕೆ ಮೂಲಕ ನೀಡುವುದು.
(3) ಈ ಯೋಜನೆಯ ಕಾಮಗಾರಿಯು ಪೂರ್ಣಗೊಂಡ ನಂತರ ಇದನ್ನು ನಿರ್ವಹಣೆಗಾಗಿ ಮತ್ತೆ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸುವುದು.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ವಿಜಾಪುರ ಜಿಲ್ಲೆಯ 16 ಕೆರೆಗಳಿಗೆ ಮತ್ತು 5 ಬಾಂದಾರಗಳಿಗೆ ಮತ್ತು ಬಾಗಲಕೋಟೆ ಜಿಲ್ಲೆಯ 7 ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಪ್ಯಾಕೇಜ್-1ರಡಿ ಅನುಷ್ಠಾನಗೊಳಿಸಲಾಗಿರುವ ಯೋಜನೆಗೆ ಹೆಚ್ಚುವರಿಯಾಗಿ 12 ಕೆರೆಗಳಿಗೆ ಮತ್ತು 3 ಬಾಂದಾರಗಳಿಗೆ ನೀರು ತುಂಬಿಸುವ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಪರಿಗಣಿಸಿ ಸಣ್ಣ ನೀರಾವರಿ ಇಲಾಖೆಯಿಂದ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಗೆ ಹಸ್ತಾಂತರಿಸಿಕೊಳ್ಳಬಹುದಾದ 5 ಕೆರೆಗಳಾದ ಸೋಮದೇವ ಹಟ್ಟಿ, ಧನ್ನರಗಿ, ಜಾಲಗೇರಿ, ಲೋಹಗಾಂವ (ವ್ಯಾಕೋಡ ವಸ್ತಿ), ಬಿಜ್ಜರಗಿ ಹಾಗೂ ಹೆಬ್ಬಾಳಹಟ್ಟಿ ಬಾಂದಾರ ಇವುಗಳಿಗೆ ನೀರು ತುಂಬಿಸುವ ಯೋಜನೆಯನ್ನು ರೂ.5.00ಕೋಟಿಗಳು ಮೀರದಂತೆ ಕೃಷ್ಣಾ ಭಾಗ್ಯ ಜಲ ನಿಗಮದಡಿ ಅನುಷ್ಠಾನಗೊಳಿಸಲು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಳಪಡುವ ಸಣ್ಣ ಕೆರೆಗಳಾದ ಕೋಟ್ಯಾಳ, ಗೋಳೆ, ಕಲಬೀಳಗಿ-1, ತಿಕೋಟಾ, ರತ್ನಾಪೂರ, ಅಳಗಿಹಾಳ ಹಾಗೂ ಬಾಂಧಾರಗಳಾದ ನಾಗರಾಳ-1 ಮತ್ತು ನಾಗರಾಳ-2 ಇವುಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲು ನಿಗಮದಡಿ ಮುಂದಿನ ಅಗತ್ಯ ಕ್ರಮ ಕೈಗೊಂಡು ಈ ಕೆರೆಗಳಿಗೆ ಮತ್ತು ಬಾಂದಾರಗಳಿಗೆ ಈಗಾಗಲೇ ಅನುಷ್ಠಾನಗೊಳಿಸಲಾಗಿರುವ ಪ್ಯಾಕೇಜ್-1 ರಡಿ ಸೇರಿಸಿಕೊಂಡು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿರುತ್ತದೆ.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ ಬಿಜಾಪುರ ಜಿಲ್ಲೆಯ ಮಮದಾಪುರ, ಸಾರವಾಡ, ಬಬಲೇಶ್ವರ, ಭೂತನಾಳ, ಬೇಗಂತಲಾಬ್ ಮತ್ತು ತಿಡಗುಂದಿ ಕೆರೆಗಳಿಗೆ ಆಲಮಟ್ಟಿ ಹಿನ್ನೀರಿನಿಂದ ದೇವರಗೆಣ್ಣೂರು ಹತ್ತಿರ ನೀರನ್ನು ಎತ್ತಿ ಈ ಕೆರೆ ತುಂಬಿಸುವ ಯೋಜನೆಯ ರೂ.172.92ಕೋಟಿಗಳ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (4)ರ ಆದೇಶದಲ್ಲಿ RIDF-XXI-NABARD ಸಹಾಯಧನದಡಿ "Construction of civil and electro-mechanical works for augmentation of filling up of 10 MI tanks in Bijapur and Bagalkot

districts (MJ20001)" ಯೋಜನಾ ಕಾಮಗಾರಿಯ ರೂ.5064.19 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (5)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಅಡಿಯಲ್ಲಿ (1) ವಿಜಯಪುರ ಜಿಲ್ಲೆಯ 16 ಕೆರೆಗಳು ಹಾಗೂ 5 ಬಾಂದಾರಗಳು ಹಾಗೂ ಬಾಗಲಕೋಟೆ ಜಿಲ್ಲೆಯ 7 ಕೆರೆಗಳನ್ನು ಹಿರೇಪಡಸಲಗಿ ಹತ್ತಿರ ನೀರನ್ನು ಎತ್ತಿ ತುಂಬಿಸುವ ಯೋಜನೆ (ಪ್ಯಾಕೇಜ್-1), (2) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಕೆರೆ ತುಂಬುವ ಯೋಜನೆ ಪ್ಯಾಕೇಜ್-1 ರಡಿಯಲ್ಲಿ ಹೆಚ್ಚುವರಿ 12 ಕೆರೆಗಳು ಮತ್ತು 3 ಬಾಂದಾರಗಳನ್ನು ತುಂಬಿಸುವ ಯೋಜನೆ, (3) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ 10 ಕೆರೆಗಳಿಗೆ ನೀರು ತುಂಬಿಸುವ ತಿಕೋಟ ಕೆರೆ ತುಂಬುವ ಯೋಜನೆ ಮತ್ತು (4) ವಿಜಯಪುರ ಜಿಲ್ಲೆಯ ಮಮದಾಪೂರ, ಸಾರವಾಡ, ಬಬಲೇಶ್ವರ, ಭೂತನಾಳ, ಬೇಗಂತಲಾಬ್ ಮತ್ತು ತಿಡುಗುಂದಿ ಕೆರೆಗಳಿಗೆ ನೀರು ತುಂಬುವ ಯೋಜನೆಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಕಾರ್ಯಗತಗೊಳಿಸಿ ಪೂರ್ಣಗೊಳಿಸಿದ್ದು, ಪ್ರಸ್ತುತ ನಿರ್ವಹಣೆ ಹಂತದಲ್ಲಿದ್ದು, ಸಣ್ಣ ನೀರಾವರಿ ಇಲಾಖೆಗೆ ಮುಂದಿನ ನಿರ್ವಹಣೆಗಾಗಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಬೇಕಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು ಮೇಲ್ಕಂಡ ಕೆರೆ ತುಂಬುವ ಯೋಜನೆಗಳನ್ನು ಮುಂದಿನ ಸೂಕ್ತ ನಿರ್ವಹಣೆಗಾಗಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲು ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

(1) ಕೆರೆ ತುಂಬುವ ಯೋಜನೆಗಳ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ ನಿರ್ವಹಣೆ ಕೈಗೊಂಡಿರುವ ಕುರಿತು ಸಂಬಂಧಪಟ್ಟ ನಿಗಮದ ಮುಖ್ಯ ಇಂಜಿನಿಯರ್/ಅಧೀಕ್ಷಕ ಇಂಜಿನಿಯರ್/ ಕಾರ್ಯಪಾಲಕ ಇಂಜಿನಿಯರ್ ಗಳು ದೃಢೀಕರಿಸುವುದು.

(2) ಕೆರೆ ತುಂಬುವ ಯೋಜನೆಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಯಾವುದೇ ಬಾಕಿ ನಿರ್ವಹಣೆಯ ಕಾಮಗಾರಿಗಳು ಇದ್ದಲ್ಲಿ ಪೂರ್ಣಗೊಳಿಸಿ ಹಸ್ತಾಂತರಿಸುವುದು.

(3) ಕೆರೆ ತುಂಬುವ ಯೋಜನೆಗಳಲ್ಲಿ ನಿರ್ವಹಣೆಯಲ್ಲಿರುವ ಕಾಮಗಾರಿಗಳ ವೆಚ್ಚದ ಮೊತ್ತವನ್ನು ನಿಗಮದ ಲೆಕ್ಕ ಪುಸ್ತಕದಲ್ಲಿ ನಮೂದಿಸಿ ಹಸ್ತಾಂತರಿಸುವ ಅವಧಿಗೆ ಮಾತ್ರ ನಿರ್ವಹಣೆ ತಗಲುವ ವೆಚ್ಚವನ್ನು ಗುತ್ತಿಗೆದಾರರಿಗೆ ಪಾವತಿಸುವುದು.

(4) ಈ ಯೋಜನೆಯ ಬಾಬ್ತು ವಿದ್ಯುಚ್ಛಕ್ತಿ ಶೇವಣಿಯೂ ಸೇರಿದಂತೆ ಹಾಗೂ ನಿಗಮದ ನಿರ್ದೇಶಕರ ಮಂಡಳಿ ಗಮನಕ್ಕೆ ತಂದು ಸಣ್ಣ ನೀರಾವರಿ ಇಲಾಖೆಗೆ ಯಾವುದೇ ಪ್ರತಿಫಲವಿಲ್ಲದೆ (without consideration) ಕೆರೆಗಳನ್ನು ಹಾಗೂ ಸಂಬಂಧಿತ ಆಸ್ತಿಗಳನ್ನು ಹಸ್ತಾಂತರಿಸಲು ಹಾಗೂ ಈಗಾಗಲೇ ಈ ಕೆರೆಗಳು ಮತ್ತು ಸಂಬಂಧಿತ ಆಸ್ತಿಗಳನ್ನು ನಿಗಮದ ಲೆಕ್ಕ ಪುಸ್ತಕಗಳಲ್ಲಿ ಬಂಡವಾಳಕರಿಸಿದ್ದರೆ ನಿವ್ವಳ ಬೆಲೆಯನ್ನು ಲಾಭ ಮತ್ತು ನಷ್ಟದ ಖಾತೆಯಡಿಯಲ್ಲಿ ಪರಿಗಣಿಸಲು ಅನುಮೋದನೆ.

ಸರ್ಕಾರವು ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಜಸಂಇ 04 ಕೆಬಿಎನ್ 2020, ಬೆಂಗಳೂರು ದಿನಾಂಕ:04/06/2020</u>

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ಅಡಿಯಲ್ಲಿ ಈ ಕೆಳಗಿನ ಕೆರೆ ತುಂಬುವ ಯೋಜನೆಗಳಾದ;

(1) ವಿಜಯಪುರ ಜಿಲ್ಲೆಯ 16 ಕೆರೆಗಳು ಹಾಗೂ 5 ಬಾಂದಾರಗಳು ಹಾಗೂ ಬಾಗಲಕೋಟೆ ಜಿಲೆಯ 7 ಕೆರೆಗಳನ್ನು ಹಿರೇಪಡಸಲಗಿ ಹತ್ತಿರ ನೀರನ್ನು ಎತ್ತಿ ತುಂಬಿಸುವ ಯೋಜನೆ (ಪ್ಯಾಕೇಜ್-1).

(2) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಕೆರೆ ತುಂಬುವ ಯೋಜನೆ ಪ್ಯಾಕೇಜ್-1 ರಡಿಯಲ್ಲಿ ಹೆಚ್ಚುವರಿ 12 ಕೆರೆಗಳು ಮತ್ತು 3 ಬಾಂದಾರಗಳನ್ನು ತುಂಬಿಸುವ ಯೋಜನೆ.

(3) ನಬಾರ್ಡ್ RIDF-XXI ಸಹಾಯಧನದಲ್ಲಿ ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ತಿಕೋಟ ಹಾಗೂ ಇತರೆ ಕೆರೆಗಳನ್ನು ಏತ ನೀರಾವರಿ ಯೋಜನೆ.

(4) ವಿಜಯಪುರ ಜಿಲ್ಲೆಯಡಿ ಮಮದಾಪುರ, ಬೇಗಂ ತಲಾಬ್ ಇತ್ಯಾದಿ ಕೆರೆ ತುಂಬುವ ಯೋಜನೆ.

- ಈ ಮೇಲಿನ ನಾಲ್ಕು ಕೆರೆ ತುಂಬುವ ಯೋಜನೆಗಳ ಅಡಿಯಲ್ಲಿ ಬರುವ ವಿಜಯಪುರ ಜಿಲ್ಲೆಯ ಕೆರೆಗಳಾದ - ಯಕ್ಕುಂಡಿ, ಕತ್ರಾಳ್, ಕುಮಠೆ (ಹೊಸ), ನಾಗರಾಳ, ನಿಡೋಣಿ (ಹಳೆ), ನಿಡೋಣಿ (ಹೊಸ), ರಾಂಪುರ, ಬಾಬಾನಗರ (ಹಳೆ), ಬಾಬಾನಗರ (ಹೊಸ), ಹುಬನೂರು, ಟಕ್ಕಳಕಿ (ಹಳೆ), ಯತ್ನಾಳ, ಬಿಜ್ಜರಗಿ (ಹಳೆ), ಬಿಜ್ಜರಗಿ (ಹೊಸ), ಕಲ್ಲಕವಟಗಿ, ಕನಮಡಿ, ಕನಮಡಿ (ಎ), ಕನಮಡಿ ಬಾಂದಾರ, ಗೊಣಸಗಿ 5 ಬಾಂದಾರಗಳು, ಹೆಬ್ಬಲಹಟ್ಟಿ ಬಾಂದಾರ-1, ನಾಗರಾಳ ಬಾಂದಾರ-1, ನಾಗರಾಳ ಬಾಂದಾರ-2, ಕೊಟ್ಯಾಳ, ಬಿಜ್ಜರಗಿ (ಹೊಸ), ಅಳಗಿನಾಳ, ತಿಕೋಟ, ರತ್ನಾಪೂರ, ಸೋಮದೇವರಹಟ್ಟಿ-1, ಲೋಹಗಾಂವ, ಸೋಮದೇವರಹಟ್ಟಿ (ಪಿಟಿ), ಲೋಹಗಾಂವ (ಬಿವಿ), ಧನ್ನರಗಿ, ಜಲಗೇರಿ, ಮಮದಾಪುರ (ದೊಡ್ಡ), ಮಮದಾಪುರ (ಸಣ್ಣ), ಬಬಲೇಶ್ವರ, ಸಾರವಾಡ, ಬೇಗಂತಲಾಬ್, ಬೂತನಾಳ ಮತ್ತು ತಿಡಗುಂದಿ ಕೆರೆಗಳು. ಮತ್ತು

ಬಾಗಲಕೋಟೆ ಜಿಲ್ಲೆಯ ನಟಕಲ್, ತೊದಲಬಾಗಿ, ಕುಮಠೆ (ಹಳೆ), ಗದ್ಯಾಳ (ಹೊಸ), ಗದ್ಯಾಳ (ಹಳೆ), ಕನ್ನೊಳ್ಳಿ, ಖಾಜಿಬೀಳಗಿ (1), ಗೋಠೆ, ಕಳಬೀಳಗಿ-1, ಕಲಬೀಳಗಿ-2, ಕುರುಗೋಡ, ಖಾಜಿಬೀಳಗಿ (2) ಕೆರೆಗಳನ್ನು ಮುಂದಿನ ನಿರ್ವಹಣೆಗಾಗಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲು ಆದೇಶಿಸಿದೆ.

(1) ಕೆರೆ ತುಂಬುವ ಯೋಜನೆಗಳ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನಗೊಳಿಸಿ ನಿರ್ವಹಣೆ ಕೈಗೊಂಡಿರುವ ಕುರಿತು ಸಂಬಂಧಪಟ್ಟ ನಿಗಮದ ಮುಖ್ಯ ಇಂಜಿನಿಯರ್/ಅಧೀಕ್ಷಕ ಇಂಜಿನಿಯರ್/ಕಾರ್ಯಪಾಲಕ ಇಂಜಿನಿಯರ್‌ಗಳು ದೃಢೀಕರಿಸುವುದು.

(2) ಕೆರೆ ತುಂಬುವ ಯೋಜನೆಗಳಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸುವ ಪೂರ್ವದಲ್ಲಿ ಯಾವುದೇ ಬಾಕಿ ನಿರ್ವಹಣೆಯ ಕಾಮಗಾರಿಗಳು ಇದ್ದಲ್ಲಿ, ಪೂರ್ಣಗೊಳಿಸಿ ಹಸ್ತಾಂತರಿಸುವುದು.

(3) ಕೆರೆ ತುಂಬುವ ಯೋಜನೆಗಳಲ್ಲಿ ನಿರ್ವಹಣೆಯಲ್ಲಿರುವ ಕಾಮಗಾರಿಗಳ ವೆಚ್ಚದ ಮೊತ್ತವನ್ನು ನಿಗಮದ ಲೆಕ್ಕ ಪುಸ್ತಕದಲ್ಲಿ ನಮೂದಿಸಿ ಹಸ್ತಾಂತರಿಸುವ ಅವಧಿಗೆ ಮಾತ್ರ ನಿರ್ವಹಣೆ ತಗಲುವ ವೆಚ್ಚವನ್ನು ಗುತ್ತಿಗೆದಾರರಿಗೆ ಪಾವತಿಸುವುದು.

(4) ಈ ಯೋಜನೆಯ ಬಾಬ್ತು ವಿದ್ಯುಚ್ಛಕ್ತಿ ಠೇವಣಿಯೂ ಸೇರಿದಂತೆ ಹಾಗೂ ನಿಗಮದ ನಿರ್ದೇಶಕರ ಮಂಡಳಿ ಗಮನಕ್ಕೆ ತಂದು ಸಣ್ಣ ನೀರಾವರಿ ಇಲಾಖೆಗೆ ಯಾವುದೇ ಪ್ರತಿಫಲವಿಲ್ಲದೆ (without consideration) ಕೆರೆಗಳನ್ನು ಹಾಗೂ ಸಂಬಂಧಿತ ಆಸ್ತಿಗಳನ್ನು ಹಸ್ತಾಂತರಿಸಲು ಹಾಗೂ ಈಗಾಗಲೇ ಈ ಕೆರೆಗಳು ಮತ್ತು ಸಂಬಂಧಿತ ಆಸ್ತಿಗಳನ್ನು ನಿಗಮದ ಲೆಕ್ಕ ಪುಸ್ತಕಗಳಲ್ಲಿ ಬಂಡವಾಳಕರಿಸಿದ್ದರೆ ನಿವ್ವಳ ಬೆಲೆಯನ್ನು ಲಾಭ ಮತ್ತು ನಷ್ಟದ ಖಾತೆಯಡಿಯಲ್ಲಿ ಪರಿಗಣಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು,
3. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
4. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
5. ಮುಖ್ಯ ಇಂಜಿನಿಯರ್, ಅಣೆಕಟ್ಟು ವಲಯ, ಆಲಮಟ್ಟಿ
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಉಪ ಕಾರ್ಯದರ್ಶಿಗಳು (ಕೆಬಿಜೆಎನ್), ಜಲ ಸಂಪನ್ಮೂಲ ಇಲಾಖೆ.
9. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.